# ಗೃಹೋದ್ಯಮ: ದುಡಿಮೆಯ ಹೊಸ ಸಾಧ್ಯತೆಗಳು

15



ತ್ರಿಶೂರು ಕೇಂದ್ರದಲ್ಲಿ ಪ್ಯಾಶನ್‌ಫ್ರೂಟ್ ಸ್ಕ್ವಾಶ್ ತಯಾರಿಯ ಆರಂಭಿಕ ಕೆಲಸ

ಕೊರೊನಾ ವೈರಸ್ ಲಾಕ್ ಡೌನ್ ಸಂಕಷ್ಟದಿಂದ ದೇಶದ ಜನರ ಸಂಕಷ್ಟಗಳಿಗೆ ಸ್ಪಂದಿಸಿದ ಪ್ರಧಾನಿ ನರೇಂದ್ರ ಮೋದಿ, 20 ಲಕ್ಷ ಕೋಟಿಯ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಣೆ ಮಾಡಿದರು. ಈ ಮೂಲಕ ಜನರಲ್ಲಿ ಆತ್ಮವಿಶ್ವಾಸ ತುಂಬಿದರು.

ದೇಶ ಉದ್ದೇಶಿಸಿ ಮಾತನಾಡಿದ ಅವರು, ಭಾರತದ ಅರ್ಥವ್ಯವಸ್ಥೆಯ ಚೇತರಿಕೆಗಾಗಿ 20 ಲಕ್ಷ ಕೋಟಿ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಣೆ ಮಾಡಿದರು. ಇದು ಜಿಡಿಪಿಯ ಶೇ.10ರಷ್ಟಿದೆ. ರೈತರು, ಕಾರ್ಮಿಕರು, ಸಣ್ಣ ವ್ಯಾಪಾರಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ, ಗೃಹೋದ್ಯಮ ನಡೆಸುವ ದೇಶದ ವಿಭಿನ್ನ ಜನರಿಗಾಗಿ ಪ್ಯಾಕೇಜ್ ಲಾಭ ಸಿಗಲಿದೆ. ದೇಶಕ್ಕಾಗಿ ತೆರಿಗೆ ಪಾವತಿಸುವರಿಗಾಗಿ ಈ ವಿಶೇಷ ಪ್ಯಾಕೇಜ್ ಘೋಷಣೆ. ನಾಳೆ ವಿತ್ತ ಸಚಿವರಿಂದ ಆತ್ಮನಿರ್ಭರ ಪ್ಯಾಕೇಜ್ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಿದ್ದಾರೆ ಎಂದರು. ಈ ವಿಶೇಷ ಆರ್ಥಿಕ ಪ್ಯಾಕೇಜ್‌ನಿಂದ ಪ್ರತಿ ವರ್ಗದ ಕಾರ್ಯಕ್ಷಮತೆ ಹೆಚ್ಚಾಗಲಿದೆ. ಲಾಕ್‌ಡೌನ್‌ನಿಂದ ರಸ್ತೆ ಬದಿ ವ್ಯಾಪಾರಿಗಳು, ಮನೆಗೆಲಸ ಮಾಡೋರು, ಪುಟ್ಟ ಅಂಗಡಿ ನಡೆಸೋರು, ಮೀನುಗಾರರು, ಮಾರುಕಟ್ಟೆ ವ್ಯಾಪಾರಿಗಳು ತುಂಬಾನೇ ಕಷ್ಟ ಅನುಭವಿಸಿದ್ದಾರೆ. ಇದೀಗ ನಾವೆಲ್ಲರೂ ಇವರನ್ನು ಆರ್ಥಿಕವಾಗಿ ಮೇಲೆತ್ತಬೇಕಿದೆ. ಈ ವಿಶೇಷ ಪ್ಯಾಕೇಜ್ ಇವರೆಲ್ಲರ ಜೀವನಕ್ಕೆ ಬೆಳಕಾಗಲಿದೆ. ಪ್ರತಿ ಭಾರತೀಯ ನಿವಾಸಿಗಳು ಸ್ಥಳೀಯಮಟ್ಟದಲ್ಲಿ ತಯಾರಾಗುವ ವಸ್ತುಗಳನ್ನ ಖರೀದಿಸಿ ಮತ್ತು ಪ್ರಚಾರ ಮಾಡುವ ಕುರಿತು ಶಪಥ ಮಾಡಬೇಕಿದೆ. ಬ್ರ್ಯಾಂಡೆಡ್ ವಸ್ತುಗಳು ಈ ಹಿಂದೆ ಲೋಕಲ್ ಆಗಿದ್ದವು. ಬಹಳ ದೀರ್ಘ ಕಾಲದವರೆಗೆ ಕೊರೊನಾ ಇರಲಿದೆ. ಲಾಕ್‌ಡೌನ್ ನಾಲ್ಕನೇ ಹಂತ ಹೊಸ ರೂಪದಲ್ಲಿ ಜಾರಿಯಾಗಲಿದೆ. ರಾಜ್ಯದ ಸಲಹೆಗಳ ಮೇರೆಗೆ ಹೊಸ ಲಾಕ್‌ಡೌನ್ ನಿಯಮಗಳ ಬಗ್ಗೆ ಮೇ 18ರೊಳಗೆ ತಿಳಿಯಲಿದೆ. ಮಾಸ್ಕ್ ಧರಿಸುವ ಮೂಲಕ ಕೊರೊನಾ ವಿರುದ್ಧ ಹೋರಾಟ ಮುಂದುವರಿಯಲಿದೆ ಎಂದರು.

ಕಳೆದ ನಾಲ್ಕು ತಿಂಗಳಿನಿಂದ ಜಗತ್ತಿನ ಎಲ್ಲ ರಾಷ್ಟ್ರಗಳು ಕೊರೊನಾ ವಿರುದ್ಧ ಹೋರಾಟ ನಡೆಸುತ್ತಿವೆ. ಕೊರೊನಾ ಸೋಂಕಿಗೆ ದೇಶದಲ್ಲಿ ಲಕ್ಷಾಂತರ ಮಂದಿ ಪ್ರಾಣ ಕಳೆದುಕೊಂಡಿದ್ದರೆ, ಕೋಟ್ಯಂತರ ಜನರ ಜೀವನ ಸಂಕಷ್ಟಕ್ಕೆ ಸಿಲುಕಿದೆ. ಒಂದು ವೈರಸ್‌ನಿಂದ ವಿಶ್ವದ ದೇಶಗಳು ಜೀವ ಉಳಿಸುವದಕ್ಕಾಗಿ ಹೋರಾಡುತ್ತಿವೆ. ಎಲ್ಲ ನಿಯಮಗಳನ್ನು ಪಾಲಿಸುತ್ತಾ ಜೀವ ಉಳಿಸಿಕೊಳ್ಳುವದರ ಜೊತೆ ಮುಂದೆ ಸಾಗಬೇಕಿದೆ. ■

# ಮನರಂಜನೆಯ ಹೊಸ ಶಕೆ

16

ಶುಕ್ರವಾರವೆಂದರೆ ಹೊಸ ಸಿನಿಮಾದ ಬಿಡುಗಡೆಯ ದಿನ ಎನ್ನುವ ಚಿತ್ರಪ್ರೇಮಿಗಳ ಲೆಕ್ಕಾಚಾರ ಕೊರೊನಾ ಸಂದರ್ಭದಲ್ಲಿ ಬದಲಾಯಿತು. ಚಿತ್ರಮಂದಿರಗಳು ಲಾಕ್‌ಡೌನ್ ಕಾರಣದಿಂದಾಗಿ ಮುಚ್ಚಿದವು. ಆಗ ಚಿತ್ರ ನಿರ್ಮಾತೃಗಳ ಪಾಲಿಗೆ ಬೆಳಕಿಂಡಿಯಂತೆ ಕಾಣಿಸಿದ್ದು 'ಒಟಿಟಿ' (ಓವರ್ ದಿ ಟಾಪ್).

ಕೇಬಲ್ ಸಂಪರ್ಕ ಅಥವಾ ಸೆಟ್ ಟಾಪ್ ಬಾಕ್ಸ್‌ನ ಹಂಗಿಲ್ಲದೆ ಇಂಟರ್ನೆಟ್ ಮೂಲಕ ಮೊಬೈಲ್ ಅಥವಾ ಟೀವಿ ಪರದೆಯ ಮೇಲೆ 'ಒಟಿಟಿ' ಮನರಂಜನೆ ಅನಾವರಣಗೊಳ್ಳಬಲ್ಲದು. ಸಿನಿಮಾ ಅಷ್ಟೇ ಅಲ್ಲ – ಧಾರಾವಾಹಿ, ಬೋಧನೆಯ ಮಾತುಕತೆ ಪ್ರಕಾರಗಳೂ 'ಒಟಿಟಿ'ಯಲ್ಲಿವೆ. 'ನೆಟ್‌ಫ್ಲಿಕ್ಸ್', 'ಅಮೆಜಾನ್ ಪ್ರೈಮ್', 'ಡಿಸ್ನಿ–ಹಾಟ್‌ಸ್ಟಾರ್', 'ಝೀ 5', 'ವೂಟ್' ಸೇರಿದಂತೆ ಕೆಲವು 'ಒಟಿಟಿ' ಪ್ಲಾಟ್‌ಫಾರ್ಮ್‌ಗಳು ಜನರಿಗೆ ಸಮೀಪವಾದವು. ಈಗ ಮೊಬೈಲ್‌ಗೆ ಹಣ ತುಂಬುವಂತೆ 'ಒಟಿಟಿ' ವೇದಿಕೆಗಳಿಗೆ ಚಂದಾದಾರರಾಗುವವರ ಸಂಖ್ಯೆ ಹೆಚ್ಚಾಗಿದೆ. ಐಪಿಎಲ್ ಪಂದ್ಯಾವಳಿಯನ್ನು ಪ್ರಸಾರ ಮಾಡಿದ 'ಡಿಸ್ನಿ–ಹಾಟ್‌ಸ್ಟಾರ್' 40 ಕೋಟಿ ಗ್ರಾಹಕರನ್ನು ಹೊಂದಿದೆ ಎನ್ನುವ ಲೆಕ್ಕಾಚಾರ, 'ಒಟಿಟಿ' ಪ್ಲಾಟ್‌ಫಾರ್ಮ್‌ಗಳ ವ್ಯಾಪಕತೆಗೆ ಉದಾಹರಣೆಯಂತಿದೆ.

ಲಾಕ್‌ಡೌನ್‌ಗೆ ಮೊದಲು ಥಿಯೇಟರ್‌ಗಳ ಬದಲು ನೇರವಾಗಿ 'ಒಟಿಟಿ' ವೇದಿಕೆಯಲ್ಲಿಯೇ ಸಿನಿಮಾಗಳನ್ನು ತೆರೆಕಾಣಿಸುವ ಟ್ರೆಂಡ್ ಸಣ್ಣದಾಗಿ ಆರಂಭವಾಗಿತ್ತು. ಚಿತ್ರಮಂದಿರಗಳು ಮುಚ್ಚಿರುವ ಸಂದರ್ಭದಲ್ಲಿ 'ಒಟಿಟಿ ರಿಲೀಸ್' ಸಾಮಾನ್ಯ ಎನ್ನುವಂತಾಯಿತು. ಕನ್ನಡದ 'ಲಾ', 'ಫ್ರೆಂಚ್ ಬಿರಿಯಾನಿ', 'ಭೀಮಸೇನ ನಳ ಮಹಾರಾಜ' ಸೇರಿದಂತೆ ಬೇರೆ ಬೇರೆ ಭಾಷೆಗಳ ಸಿನಿಮಾಗಳು 'ಒಟಿಟಿ'ಯಲ್ಲಿ ತೆರೆಕಂಡು ಪ್ರೇಕ್ಷಕರನ್ನು ರಂಜಿಸಿವೆ. ಸುಶಾಂತ್ ಸಿಂಗ್ ರಜಪೂತ್ ಅಭಿನಯದ ಕೊನೆಯ ಚಿತ್ರ 'ದಿಲ್ ಬೆಚಾರ', ಅಕ್ಷಯ್ ಕುಮಾರ್ ನಟನೆಯ 'ಲಕ್ಷ್ಮೀ', ಅಭಿಷೇಕ್ ಬಚ್ಚನ್‌ರ 'ಲುಡೊ', ಬಯೊಪಿಕ್ 'ಗುಂಜನ್ ಸಕ್ಸೇನಾ', ಕ್ಯಾಪ್ಟನ್ ಗೋಪಿನಾಥ್ ಅವರ ಜೀವನ ಆಧರಿಸಿದ ತಮಿಳಿನ 'ಸೂರರೈ ಪೊಟ್ರು', ತೆಲುಗಿನಲ್ಲಿ ನಾನಿ ಅಭಿನಯದ 'ವಿ' – ಇವೆಲ್ಲ 2020ರಲ್ಲಿ ಒಟಿಟಿಯಲ್ಲಿ ತೆರೆಕಂಡು ಜನಮೆಚ್ಚುಗೆ ಪಡೆದ ಕೆಲವು ಪ್ರಮುಖ ಚಿತ್ರಗಳು. ಈ 'ಒಟಿಟಿ ರಿಲೀಸ್' ಚಿತ್ರಮಂದಿರಗಳು ತೆರೆದ ನಂತರವೂ ಚಿತ್ರರಂಗದ ಅನಿವಾರ್ಯ ಆಯ್ಕೆಯಾದರೂ ಆಶ್ಚರ್ಯವಿಲ್ಲ. ■

**2018ರಲ್ಲಿ 'ಒಟಿಟಿ' ವೇದಿಕೆಯಲ್ಲಿ ಹೂಡಿಕೆಯಾಗಿದ್ದ ಬಂಡವಾಳ ಸುಮಾರು 366 ಕೋಟಿ ರೂಪಾಯಿ. ಇದು 2023ರ ವೇಳೆಗೆ ಐದುನೂರು ಪಟ್ಟು ಹೆಚ್ಚುವ ನಿರೀಕ್ಷೆಯಿದೆ.**